2. ಅವರವರಿಗೆ ಮೇಲ್‌ಕಂಡ ತಾಲ್ಲೂಕುಗಳ ಅಮಲ್‌ದಾರ್ರಿಂದ ನೋಟಸ್ ತಲಪಿದ ಮೇಲೆ ಸದರೀ ಟೈಟಲ್ ಡೀಡ್‌ಗಳನ್ನು ತೆಗದುಕ್ಕೊಳ್ಳುವ ಬಗ್ಗೆ ಆ ಮೇರೆ ಹಾಜರಾಗತಕ್ಕದ್ದು. ಮತ್ತು ಅಂತಾ ನೋಟಸ್‌ಗಳನ್ನು ಕೂಡ್ಲೇ ಕೊಡುವಂತೆ ಅಮಲ್‌ದಾರ್ರಿಗೆ ಹುಕ್ಕುಂ ಆಗಿರುತ್ತೆ.

R. A. COLE,
*Supt. of Inam Settlements.*

---

ಫಿನಾನ್ಷಿಯಲ್ ಇಲಾಖೆ.

ತಾರೀಖು 12ನೇ ಜನವರೀ 1876.

ಶಿವಮೊಗ್ಗ ವ ಕಡೂರು ಡಿಸ್ಟ್ರಿಕ್ಟು ಟ್ರೆಜರೀಗಳ ಮೇಲೆ 500 ರೂಪಾಯಿಗೆಗೆ ಕಡಮೆಯಿಲ್ಲದ ಮೊಬಲಗಿಗೆ. ಸದರೀ ಡಿಸ್ಟ್ರಿಕ್ಟು ಖಜಾನೇಗಳಲ್ಲಾಗಲಿ, ತಾಲ್ಲೂಕು ಖಜಾನೇಗಳಲ್ಲಾಗಲಿ, ಮೊದಲು ವದಗಿದ ಮೊಬಲಗಿನಿಂದ ಹಣ ಸಲ್ಲತಕ್ಕ ನೇಕಡಾ 2 ಆಣೆ ವಟ್ಟಿಕ್ಕೆ ಸವ್ಲ್ಯೆ ಬಿಲ್‌ಗಳೆಂಬ ಹುಂಡಿಗಳನ್ನು ಕೊಡಲಿಕ್ಕೆ ಈ ಕೆಳಗೆ ರುಜೂ ಮಾಡಿರುವವರು ತಯಾರಾಗಿರುತ್ತಾರೆ.

H. HUDSON,
*Dy. Acctt. Genl. in Mysore.*

---

ಫಾರೆಸ್ಟ್ ಇಲಾಖೆ.

ತಾರೀಖು 11ನೇ ಡಿಸೆಂಬರ್ 1875.

ಇದರಿಂದ ತಿಳಿಸಲ್ಪಡುವದೇನಂದರೆ,—ಹೆಜ್ಜುಕಡಮೆ ಪುಮಾರ್ 24 ಟರ್ಗಗಳ ವಜನೀ ಯುಳ್ಳ ಸಂದಲ್ ಯಿದರಡಿ ವಿವರಿಸಲ್ಪಡುವ ತಾರೀಖುಗಳಲ್ಲಿಯೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

1876ನೇ ಫಿಬ್ರವರೀ 15ನೇ ಮೆರ್ಕುಂಬಲ್ಲಿ, ಶಿವಮೊಗ್ಗಾ ಕೋರ್ಟಿಯೊಳಗೆ $18\frac{1}{2}$ ಟರ್ಗಗಳು. ಬಗರಿ ಅದದ್.
1876ನೇ ಫಿಬ್ರವರೀ 24ನೇ ಮರ್ಕುಂಬಲ್ಲಿ, ಕವಲೇದುರ್ಗ ಕೋರ್ಟಿಯಲ್ಲಿ $5\frac{1}{2}$ ಟರ್ಗಗಳು. ಚಕ್ಕೆವ ಬುಕಣಿ.

ಹರಾಜ್ ತಾರೀಖು ಲಾಗಾಯತು ಮೂರುದಿನಗಳೊಳಗಾಗಿ ದರಖಾಸ್ತು ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಮೇರೆ ಪಾವತೀ ಮಾಡತಕ್ಕದ್ದು. ಬಾಕೀ ಮೊಬಲಗ್ ಹರಾಜ್ ತಾರೀಖು ಲಾಗಾಯತು 20 ದಿನಗಳೊಳಗಾಗಿ ಪಾವತೀ ಮಾಡತಕ್ಕದ್ದು.

---

ತಾರೀಖು 11ನೇ ಡಿಸೆಂಬರ್ 1875.

ಇದರಿಂದ ತಿಳಿಸಲ್ಪಡುವದೇನಂದರೆ,—ನಗರ್‌ಡಿವೀರ್ಜನಲ್ಲಿ ಉತ್ಪತ್ತಿಯಾದ ಬಾಬತು ಈ ಕೆಳಗೆ ಕಂಡ ಸಾಗುವಾನೀ ವ ಇತರ ಜಾತೀ ದಿಮ್ಮಿಗಳು ಯಿದರಡಿ ವಿವರಿಸಲ್ಪಟ್ಟ ತಾರೀಖು ವ ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

| ಹರಾಜ್ ತಾರೀಖು ವ ಸ್ಥಳದ ಹೆಸರು. | ಸಾಗುವಾನೀ | ಬೀಟೀವುರ. | ಕಾಡುವುರ. | ತ್ಯಾಗದ ಕೂಬಗಳು. | ಕಾಡುವುರ | ಜುಮ್ಲಾ. |
|---|---|---|---|---|---|---|
| 1ನೇ ಫಿಬ್ರವರೀ 1876; ಆಯನೂರು ಡಿಪೋ ಶಿವಮೊಗ್ಗಾ ತಾಲ್ಲೂಕು. | 465 | 60 | 433 | 270 | 110 | 1,338 |

ಹರಾಜ್ ನಿಬಂಧನೆ—1873ನೇ ಜೂ॥ 12ನೇ ಮರ್ಕುಂ 20ನೇ ನಂಬರ್ ಬಾಬತು ಮೈಸೂರು ಗೆಜೆಟ್ ಇಸ್ತಿಹಾರ್‌ನಾಮೇ ಅನುಸರಿಸಿ ಶಿವಮೊಗ್ಗಾ ತಾಲ್ಲೂಕು ಟ್ರೆಜರೀಯಲ್ಲಿ ಮೊಬಲಗ್ ಪಾವತೀ ಮಾಡತಕ್ಕದ್ದಲ್ಲದೆ ದರಖಾಸ್ತು ಮೊಬಲಗ್ ಪೈಕೀ ಶೇಕಡಾ ಇಪ್ಪತ್ತೈದರ ಮೇರೆ ಸದರೀ ಟ್ರೆಜರೀಯಲ್ಲಿ ಪಾವತೀ ಮಾಡಿ ಪಡೆದುಕ್ಕೊಂಡ ರಸೀದಿಯನ್ನು ಹರಾಜ್ ತಾರೀಖು ಲಾಗಾಯತು 5ನೇ ದಿನ ಪೂರೈಸಲಿಕ್ಕೆ ಮುಂಚಿತವಾಗಿಯೇ ಹರಾಜ್ ನಡಿಸುವ ಆಫಿಸರರಲ್ಲಿ ಹಾಜರ್ ಮಾಡತಕ್ಕದ್ದು. ಪರತ್ತಿಗೆ ತಪ್ಪಿದವರ ಬಾಬತು ನಾಟುಗಳನ್ನು ಪುನಶ್ಚ ವಿಕ್ರಯಿಸುವ ಬಗ್ಗೆ ಹರಾಜ್ ತಾರೀಖು ಲಾಗಾಯತು 6ನೇ ದಿನ ಡಿಪೋದಲ್ಲಿಯೇ ಯರಡನೆ ಹರಾಜ್ ನಡಿಸಲ್ಪಡುವದು.

---

ತಾರೀಖು 10ನೇ ಜನವರೀ 1876.

ಇದರಿಂದ ಪ್ರಸಿದ್ಧ ಪಡಿಸುವದೇನಂದರೆ,—ನಗರ ಡಿವೀರ್ಜ ಬಾಬತು ಈ ಕೆಳಗೆ ಬರುವ ತೇಗದ ವ ಇತರ ಮರಗಳ ದಿ ಮ್ಮೀಗಳು ಯಿದರಡಿ ತಿಳಿಸಲ್ಪಟ್ಟ ತಾರೀಖುಗಳೊಳಗೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

| ಡಿಪೋ ಹೆಸರು | ಹರಾಜ್ ತಾರೀಖು | ತೇಗದ ಮರ | ಬೀಟೇಮರ | ಜಂಗ್ಲೀಮರ | ತೇಗದ ಕೂಜಗಳು | ಜಂಗ್ಲೀ ಮರದ ಕೂಜಗಳು | ಜುಮ್ಲಾ. |
|---|---|---|---|---|---|---|---|
| ಶಿಕಾರಿಪುರ ತಾಲ್ಲೂಕಿನಲ್ಲಿರು ವ ಶಿಕಾರಿಪುರದ ಡಿಪೋ | 15ನೇ ಮಾರ್ಚೀ 1876. | 959 | 633 | 408 | 265 | 57 | 2,322 |
| ಶಿಕಾರಿಪುರ ತಾಲ್ಲೂ ನಲ್ಲಿರು ವ ಶಿರಾಳ ಕೊಪ್ಪದ ಡಿಪೋ | 25ನೇ ಮಾರ್ಚೀ 1876. | 129 | 162 | 574 | 37 | 43 | 945 |
| ಜುಮ್ಲಾ. | | 1,088 | 795 | 982 | 302 | 100 | 3,267 |

ಹರಾಜ್ ನಿಬಂಧನೆಗಳು.

1873ನೇ ಇಸವಿ ಜೂನ್ 12ನೇ ಮತ್ತು ಂ 20ನೇ ನಂಬರ್ ಮೈಸೂರು ಗೆಜೆಟ್ ಇಸ್ತಿಹಾರ್ ಪ್ರಕಾರ.

ಶಿಕಾರಿಪುರದಲ್ಲಿರುವ ತಾಲ್ಲೂಕು ಖಜಾನೇಯಲ್ಲಿ ಮೊಬಲಗ್ ಪಾವತೀಮಾಡತಕ್ಕದ್ದು, ಖರೀದಿ ಮೊಬಲಗಿನಲ್ಲಿ ಶೇಕಡಾ 25 ರೂ ಪಾಯಿ ಪ್ರಕಾರ ಐನ್ ಖಜಾನೇಯಲ್ಲಿ ಪಾವತೀಮಾಡಿ ಆಬಗ್ಯೆ ಪಡೆದ ರೀದಿಯನ್ನು ಹರಾಜುನಡಿಸುವ ಆಫಿಸರರಿಗೆ ಹರಾಜು ತಾ ರೀಖು ಲಾಗಾಯತು ಐದನೇದಿನ ಸಾಯಂಕಾಲಕ್ಕೆ ಪೂರ್ವ ಕೊಡತಕ್ಕದ್ದು.

ಹರಾಜ್ ತಾರೀಖು ಲಾಗಾಯತು 6ನೇ ದಿನ ಹಣ ಪಾವತೀ ಮಾಡುವದಕ್ಕೆ ತಪ್ಪಿದವರ ಮರವನ್ನು ಪುನಶ್ಚ ಮಾರಲಿಕ್ಕೆ ಪ್ರತಿ ಡಿಪೋಯಲ್ಲಿಯೂ ಯಾರಡನೇ ಹರಾಜ್ ನಡಿಸಲ್ಪಡುವದು.

G. J. VAN SOMEREN, *Captain,*
*Conservator of Forests, Mysore & Coorg.*

BANGALORE DISTRICT.

Notice regarding an application of Channabasappa for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟು ಡಿ॥ ಕಮ್ಮಿಷನರ್ ಕೋರ್ಟಿನಿಂದ.

ಸ್ರ 1876ನೇ ಯಿಸವಿ ಸಿವಿಲ್ ಮಿಸಲೇನಿಯಸ್ ನಂಬರ್ 4.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—ದೊಡ್ಡಬಳ್ಳಾಪುರ ಕಸಬೇಯಲ್ಲಿರುವ ಚನ್ನಬಸಪ್ಪ ನೆಂಬುವನು ತನ್ನ ತಂದೆ ಪಾಪಂಣನ ಲೇಣಿ 1000 ರೂಪಾಯಿ ಬರಮಾಡಿ ಕೊಳ್ಳತಕ್ಕ ಬಗ್ಯೆ ಸ್ರ 1860ನೇ ಯಿಸವಿ 27ನೇ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಯಿಸವಿ ಫಿಬ್ರುವರೀ 14ನೇ ತಾರೀಖು ಮಧ್ಯಾಹ್ನ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಕೆ ಮಾಡಲ್ಪಡುತ್ತೇಯಾಗಿ ಆ ಮೊಬಲಗಿನ ಮೇಲೆ ಹಕ್ಕು ಪುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡ ಬಹುದು.

ಬ ತಾರೀಖು 12ನೇ ಮಾಹೆ ಜನವರೀ 1876ನೇ ಯಿಸವಿ, ಮೊಕ್ಕಾಂ ದೊಡ್ಡಬಳ್ಳಾಪುರ.

Notice regarding an application of Giriyamma for a certificate under Act XXVII of 1860.

ಸ್ರ 1876ನೇ ಇಸವಿ ಸಿವಿಲ್ ಮಿಸಿಲೇನಿಯಸ್ ನಂಬರ್ 6.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ನೆಲವಂಗಲ ತಾಲ್ಲೂಕು ತ್ಯಾವಗೊಂಡ್ಲದಲ್ಲಿ ಇರುವ ಗಿರಿಯಮ್ಮ ಎಂಬ ತನ್ನ ಗಂಡ ಚಿಕ್ಕರಂಗನ ಲೇಣಿ 300 ರೂಪಾಯಿ ಬರಮಾಡಿಕೊಳ್ಳತಕ್ಕ ಬಗ್ಯೆ ಸ್ರ 1860ನೇ ಇಸವಿ 27ನೇ ಆಕ್ಟು ಪ್ರ